ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ ಪುನರವಸತಿ ಮತ್ತು ಪುನರನಿರ್ಮಾಣ, ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ.
ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರನಿರ್ಮಾಣ ಕಾಯ್ದೆ 2013ರ
(ದಿ:01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ರೊಂದಿಗೆ ಓದಲಾದ ಕಲಂ 11(1) ರಲ್ಲಿ ಮಾಡಿದ ಅಧಿಸೂಚನೆ

ಸಂ. ಭೂಸ್ವಾ/ಜ/ಸಿಆರ್-03/17-18 (02/08-09) ದಿನಾಂಕ: 05-05-2017.

ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಬಾಗಲಕೋಟ ಜಿಲ್ಲೆಯ ಮುದೋಳ ತಾಲೂಕಿನ ಚಿಕ್ಕೂರ ಗ್ರಾಮದಲ್ಲಿ ಬರುವ ಚಿತ್ರಭಾನಕೋಟೆ ಮೈನರ್ ಕಾಲುವೆ ನಿರ್ಮಾಣದಲ್ಲಿ ಅಸಿಂಧೂವಾದ ಚಿಕ್ಕೂರ ಗ್ರಾಮದ ಹೆಚ್ಚುವರಿ ಕ್ಷೇತ್ರಕ್ಕೆ ಭೂಸ್ವಾಧೀನ ಪ್ರಸ್ತಾವನೆ ಬೇಕಾಗುವುದೆಂದು ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ, ಪುನರ ವಸತಿ ಮತ್ತು ಪುನರ ನಿರ್ಮಾಣ, ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ ಇವರಿಗೆ ಕಂಡು ಬಂದಿದೆ.

ಈ ಮೂಲಕ ತಿಳಿಸುವದೇನೆಂದರೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ರ (ದಿನಾಂಕ: 01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಸದರಿ ಕಾಯ್ದೆಯ ಕಲಂ.11 ರ ಸೌಲಭ್ಯದ ಮೇರೆಗೆ (2013 ಕೇಂದ್ರದ 30 ನೇ ಕಾಯ್ದೆ) ಸದರ ಕಾನೂನಿನ ಕಲಂ 12 ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ, ಪುನರವಸತಿ ಮತ್ತು ಪುನರನಿರ್ಮಾಣ, ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ ಇವರಿಗೆ ನೀಡಲಾಗಿದೆ. [ಸೂಕ್ತ ಪರಿಹಾರದ ಹಕ್ಕು ಮತ್ತು ಭೂಸ್ವಾಧೀನ, ಪುನರ್ ವಸತಿ ಮತ್ತು ಪುನರ್ ನಿರ್ಮಾಣದಲ್ಲಿ ಪಾರದರ್ಶಕತೆ (ಕರ್ನಾಟಕ) ನಿಯಮಾವಳಿಗಳು (ದಿನಾಂಕ:21-01-2014ರಂದು ಜಾರಿಗೆ ಬಂದ ಅಧಿಸೂಚನೆ ಪ್ರಕಾರ) ಅಧ್ಯಾಯ 1 ರ ಅನುಕ್ರಮ ನಂ.2(ಬಿ) ನೋಡಿ] ಹಾಗೂ ಕಲಂ.43ರ ಮೇರೆಗೆ ಪುನರ ವಸತಿ, ಪುನರ್ ನಿರ್ಮಾಣದ ಅಧಿಕೃತ ಕಾರ್ಯಪಾಲನೆ ಪ್ರಾಧಿಕಾರವನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ಮಲಪ್ರಭಾ ಯೋಜನೆ-3, ಬಾಗಲಕೋಟ. ಇವರಿಗೆ ನೀಡಲಾಗಿದೆ.

ಘಟಪ್ರಭಾ ನೀರಾವರಿ ಯೋಜನೆಯ ಸನ್ ೧೯೬೩ ರ ಪೂರ್ವದಲ್ಲಿಯೇ ಆರಂಭವಾಗಿದ್ದು. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ.6(2)ರಡಿಯಲ್ಲಿ ನೀರಾವರಿ ಯೋಜನೆಗಳಿಗಾಗಿ ಭೂಸ್ವಾಧೀನ ಪಡಿಸುವಾಗ ಪರಿಸರದ ಮೇಲಿನ ಪರಿಣಾಮ ನಿರ್ಧರಣದ ಅಂಶ (Environmental Impact Assessment) ಪ್ರಕ್ರಿಯೆಯನ್ನು ಬೇರಾವುದೇ ಕಾಯ್ದೆಗಳಡಿಯಲ್ಲಿ ಮಾಡಬೇಕಾದಲ್ಲಿ ಸಾಮಾಜಿಕ ನಿರ್ಧರಣದ ಅಂಶ (Social Impact Assessment) ಅನ್ವಯಿಸುವುದಿಲ್ಲವೆಂದು ಸ್ಪಷ್ಟೀಕರಿಸಿದೆ. ಅದರಂತೆ ಘಟಪ್ರಭಾ ನೀರಾವರಿ ಯೋಜನೆಯು 1963ರ ಪೂರ್ವದಲ್ಲಿಯೇ ಅರಂಭವಾಗಿದ್ದರಿಂದ EIA ಅನ್ವಯಿಸುವುದಿಲ್ಲವೆಂದು ಬಾಗಲಕೋಟ ಜಿಲ್ಲೆಯ ಮುದೋಳ ತಾಲೂಕಿನ ಚಿಕ್ಕೂರ ಗ್ರಾಮದಲ್ಲಿ ಬರುವ ಚಿತ್ರಭಾನಕೋಟೆ ಮೈನರ್ ಕಾಲುವೆ ನಿರ್ಮಾಣದಲ್ಲಿ ಅಸಿಂಧೂವಾದ ಚಿಕ್ಕೂರ ಗ್ರಾಮದ ಹೆಚ್ಚುವರಿ ಕ್ಷೇತ್ರಕ್ಕೆ ಭೂಸ್ವಾಧೀನವು ಘಟಪ್ರಭಾ ಯೋಜನೆಗೆ ಸಂಬಂಧಪಟ್ಟಿರುತ್ತದೆ. ಆದ್ದರಿಂದ ಪರಿಸರ ಇಲಾಖೆಯ ನೀರಕ್ಷೇಪಣಾ ನಿರ್ಧರಣದ ಅಂಶದ ವರದಿಯ ಅವಶ್ಯಕತೆ ಇರುವುದಿಲ್ಲವೆಂದು ಕಾರ್ಯಪಾಲಕ ಇಂಜನೀಯರ್ ಕ.ನೀ.ನಿ.ನಿ ಎಂ.ಬಿ.ಸಿ. ವಿಭಾಗ ನಂ-1, ಗದ್ದನಕೇರಿ ಕ್ಯಾಂಪ್ ಬಾಗಲಕೋಟ ಇವರು ತಿಳಿಸಿರುತ್ತಾರೆ.

2013 ರ ಕಾಯ್ದೆ ಕಲಂ 15(1) ರ ಮೇರೆಗೆ ಆಸಕ್ತಿವುಳ್ಳವರು ತಮ್ಮ ತಂಟೆ-ತಕರಾರುಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಮಲಪ್ರಭಾ ಯೋಜನೆ-3, ಬಾಗಲಕೋಟ ಇವರ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಗೆ ಹಾಕಲಾಗುವುದು.

ಈ ಜಮೀನು ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೊಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರವಸತಿ ಮತ್ತು ಪುನರನಿರ್ಮಾಣ ಕಾಯ್ದೆ 2013 ರ ಕಾಯ್ದೆ ಕಲಂ 11(4) ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂದಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು, ಮಲಪ್ರಭಾ ಯೋಜನೆ-3, ಬಾಗಲಕೋಟ ಇವರ ಕಚೇರಿಯಲ್ಲಿ ಜಮೀನಿನ ಕರಡು ಯೋಜನೆಯ ನಕ್ಷೆಯನ್ನು ನಿರೀಕ್ಷಣೆಗಾಗಿ ಇಡಲಾಗಿದೆ.

## ಅನುಸೂಚಿ

ಜಿಲ್ಲೆ: ಬಾಗಲಕೋಟ ತಾಲೂಕ: ಮುಧೋಳ ಹೋಬಳಿ: ಲೋಕಾಪೂರ ಗ್ರಾಮ:ಚಿಕ್ಕೂರ

ನಂ:ಎಲ್ಎಕ್ಯೂ:ಎಸ್ಆರ್: 56/2016-2017

| ಅ ನಂ | ಖಾತೆದಾರ ಹೆಸರು | ಅನುಭವದಾರರ ಹೆಸರುಗಳು | ಸರ್ವೆ ನಂ | ಜಮೀನಿನ ತರಹೆ | ಚಕಬಂದಿ | | | | ಭೂಸ್ವಾಧೀನ ಪಡೆಯುವ ಕ್ಷೇತ್ರ ಎ ಗುಂ | ಆಕಾರ ರೂಪೈ | ಬಾವಿ ಕಟ್ಟಡ ಗಿಡ ಮರ |
|---|---|---|---|---|---|---|---|---|---|---|---|
| | | | | | ಪೂರ್ವ | ಪಶ್ಚಿಮ | ದಕ್ಷಿಣ | ಉತ್ತರ | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಸತ್ತೆವ್ವ ಗಂ.ಚನ್ನಗೌಡ ಕಮತಗಿ | ಎಮ್.ಆರ್ ಟಿ119/2012–2013<br>ಎಮ್.ಆರ್ 60/2011–2012<br>ಎಮ್.ಆರ್ 58/2010–2011<br>ಎಮ್.ಆರ್ 30/2010–2011<br>ವಿ.ಎಸ್.ಎಸ್ ಹೆಬ್ಬಾಳ ಬೋ 1600/–<br>59 ಕ.ವಿ.ಗ್ರಾ ಬ್ಯಾಂ ಬೋ 90000/–<br>ಪ್ರಾ.ಕೃ. ಬೋ 70000/– ಕ.ವಿ.ಗ್ರಾ<br>ಬ್ಯಾಂ ಬೋ 75000/–; ಮ್ಯಾ.<br>ವಿಜಯಾ ಬ್ಯಾಂಕ ಶಾಖೆ ಚಿಕ್ಕೂರ,;<br>250000/– | 74/1 | ಮರಡಿ | 71 | ಗ್ರಾಮದ ಗಡಿ | 75 | ಗ್ರಾಮದ ಗಡಿ | 00–06–00 | 02.00 | |
| 2 | ಸಾತವ್ವ ಗಂ.ರಾಮಲಿಂಗಪ್ಪ ಉರ್ಪ<br>ರಾಮಪ್ಪ ಜಂಬಗಿ<br>ಗೌರವ್ವ ಯಾದಪ್ಪ ನೀಡೋಣಿ<br>ತುಳಜಪ್ಪ ರಾಮಲಿಂಗಪ್ಪ ಜಂಬಗಿ<br>ಯಲ್ಲವ್ವ ಸುರೇಶ ಯಡಹಳ್ಳಿ<br>ನೀಲವ್ವ ಯಲ್ಲಪ್ಪ ನೀಡೋಣಿ<br>ಶಿವಪ್ಪ ಧರೆಪ್ಪ ಜಂಬಗಿ | ಬಸವೇಶ್ವರ ಬ್ಯಾಂಕ ಬೋಜಾ<br>ಶಿವಪ್ಪನ ಹಿಸ್ಸಾದ ಮೇಲೆ<br>100000/– 2959 3354<br>ಎಮ್.ಆರ್ 65/2009–2010<br>ಗ್ರಾ.ಬ್ಯಾಂ ಬೋ 250000/– | 74/2 | ಮರಡಿ | 71 | ಗ್ರಾಮದ ಗಡಿ | 75 | ಗ್ರಾಮದ ಗಡಿ | 00–03–00 | 02.58 | |
| 3 | ರಂಪ್ಪ ದುಂಡಪ್ಪ ತುಂಗಳ | ಎಮ್.ಆರ್ ಟಿ137/2012–2013<br>ಎಮ್.ಆರ್ 205/2012–2011<br>ಎಮ್.ಆರ್ 121/2010–2011<br>ಎಮ್.ಆರ್ 96/2010–2011<br>ಆಕ್ಷಿಸ ಬ್ಯಾಂಕ ಬೋ 500000/–<br>ಪ್ರಾ.ಕೃ ಪ.ಸ ಬ್ಯಾಂಕ ಬೋ<br>100000/–; ಮ್ಯಾ. ವಿಜಯಾ<br>ಬ್ಯಾಂಕ ಶಾಖೆ ಚಿಕ್ಕೂರ, 270000/– | 74/3ಅ | ಮರಡಿ | 71 | ಗ್ರಾಮದ ಗಡಿ | 75 | ಗ್ರಾಮದ ಗಡಿ | 00–05–00 | 04.15 | |

| | | | | | | | | | | |
|---|---|---|---|---|---|---|---|---|---|---|
| 4 | ಶಂಕ್ರೆಪ್ಪ ರೇಖಪ್ಪ ಲಮಾಣಿ<br>ಸುಭಾಸ ರೇಖಪ್ಪ ಲಮಾಣಿ | ಎಮ್.ಆರ್ ಟಿ198/2012–2013<br>ಎಮ್.ಆರ್ 293/2009–2010<br>ಎಮ್.ಆರ್ 228/2009–2010<br>ಕ.ವಿ.ಗ್ರಾ ಬ್ಯಾಂಕ ಬೋ 110000/–;<br>ಮ್ಯಾ ವಿಜಯಾ ಬ್ಯಾಂಕ ಶಾಖೆ<br>ಚಿಕ್ಕೂರ:0 | 74/3ಬ | ಮರಡಿ | 71 | ಗ್ರಾಮದ ಗಡಿ | 75 | ಗ್ರಾಮದ ಗಡಿ | 00–02–00 | 03.34 | |
| 5 | ಕರಿಯಪ್ಪ ಬೆನ್ನಪ್ಪ ಮಾಯನ್ನವರ | ಎಮ್.ಆರ್ 146/2009–2010<br>ಎಮ್.ಆರ್ 79/2009–2010<br>ಎಮ್.ಆರ್ 168/2008–200–<br>ಎಮ್.ಆರ್ 67/2007–2008<br>ಗ್ರಾ ಬ್ಯಾಂ ಬೋ 110000/– | 74/4 | ಕೆಂಪು ಮರಡಿ | 71 | ಗ್ರಾಮದ ಗಡಿ | 75 | ಗ್ರಾಮದ ಗಡಿ | 00–06–00 | 03.02 | |
| 6 | ಹೊಳಿಬಸಪ್ಪ ಪಾಂಡಪ್ಪ ಗಡ್ಡಿ<br>ಗೋವಿಂದಪ್ಪ · ಪಾಂಡಪ್ಪ ಗಡ್ಡಿ. | ಎಮ್.ಆರ್ ಎಚ್128/2011–2012<br>ಎಮ್.ಆರ್ 22/2011–2012<br>ಎಮ್.ಆರ್ 96/2009–2010<br>ಎಮ್.ಆರ್ 44/2005–2006<br>ಗ್ರಾ. ಸೇ ಸ ಸಂ ಬೋ 700/–<br>1658 ಚಿಕ್ಕೂರ ಬೋಜಾ 60000/–<br>ಪ್ರಾ.ಕೃ ಪ ಸ ಬ್ಯಾಂಕ ಬೋ<br>18000/– ಕವಿಗ್ರಾ ಬ್ಯಾಂಕ ಬೋ<br>150000/– ಪ್ರಾ ಕೃ ಪ ಸ ಬ್ಯಾಂಕ<br>ಹೆ ಬೋ 16000/– | 75/4 | ಮರಡಿ | 71 | ಗ್ರಾಮದ ಗಡಿ | 76, 77 | 74 | 00–02–00 | 01.20 | |
| 7 | ಗಿರೆವ್ವ ಕೆಂಚಪ್ಪಾ ಚಿಪ್ಪಲಕಟ್ಟಿ<br>ಭೀಮಪ್ಪ ಹನಮಪ್ಪ ಅರಳೀಕಟ್ಟಿ<br>ದ್ಯಾವಪ್ಪ ಹನಮಪ್ಪ ಅರಳೀಕಟ್ಟಿ<br>ಯಲ್ಲಪ್ಪ ಹನಮಪ್ಪ ಅರಳೀಕಟ್ಟಿ<br>ಲಕ್ಷ್ಮಪ್ಪ ಹನಮಪ್ಪ ಅರಳೀಕಟ್ಟಿ<br>ಯಮನಪ್ಪ ಗೋವಿಂದಪ್ಪ ಅರಳಿಕಟ್ಟಿ<br>ಹೊಳೆಬಸಪ್ಪ ವೆಂಕಪ್ಪ ಅರಳಿಕಟ್ಟಿ<br>ಗ್ಯಾನಪ್ಪ ವೆಂಕಪ್ಪ ಅರಳಿಕಟ್ಟಿ<br>ಮುತ್ತಪ್ಪ ದ್ಯಾವಪ್ಪ ಅರಳಿಕಟ್ಟಿ | – | 77/1 | ಮರಡಿ | 76 | ಗ್ರಾಮದ ಗಡಿ | 78 | 75 | 00–06–00 | 01.73 | |

| | | | | | | | | | | | |
|---|---|---|---|---|---|---|---|---|---|---|---|
| 8 | ದ್ಯಾವಪ್ಪ ರೇಖಪ್ಪ ಲಮಾಣಿ<br>ಶಂಕರ ರೇಖಪ್ಪ ಲಮಾಣಿ<br>ಸುಭಾಸ ರೇಖಪ್ಪ ಲಮಾಣಿ<br>ನಾಮದೇವ ರೇಖಪ್ಪ ಲಮಾಣಿ 2 3<br>ಅ ಪಾ ಕ ಅಣ್ಣ ಶಂಕರ | ಎಮ್.ಆರ್ ಟಿ74/2013–2014 ವ್ಹಿ.ಎಸ್.ಎಸ್ ಚಿಕ್ಕೂರ ಬೋ 10000/– 2694; ಮ್ಯಾ ವಿಜಯಾ ಬ್ಯಾಂಕ ಚಿಕ್ಕೂರ;356000 ಎಮ್.ಆರ್ ಟಿ74/2013–2014 ವ್ಹಿ.ಎಸ್.ಎಸ್ ಚಿಕ್ಕೂರ ಬೋ 10000/– 2694; ಮ್ಯಾ ವಿಜಯಾ ಬ್ಯಾಂಕ ಚಿಕ್ಕೂರ;356000 | 79/1 | ಮರಡಿ | 71 | 78 | 80 | 76 | 00–01–00 | 00.69 | |
| 9 | ಬೀರಪ್ಪ ರಂಗಪ್ಪ ತೆಗ್ಗಿ<br>ಮಾಳಪ್ಪ ರಂಗಪ್ಪ ತೆಗ್ಗಿ<br>ಶಿವಾನಂದ ರಂಗಪ್ಪ ತೆಗ್ಗಿ<br>ತುಳಸವ್ವ ರಂಗಪ್ಪ ತೆಗ್ಗಿ | ಎಮ್.ಆರ್ ಎಚ್175/2011–2012 ಎಮ್.ಆರ್ 73/2010–2011 ಎಮ್.ಆರ್ 107/2009–2010 ಎಮ್.ಆರ್ 30/2006–2007 ಪ್ರಾ.ಕೃ ಪ ಸ ಬ್ಯಾಂಕ ಬೋ 60000/– ಪಿ.ಕೆ.ಪಿ.ಎಸ್ ಬ್ಯಾಂಕ ಬೋ 18000/– ಕವಿಗ್ರಾ ಬ್ಯಾಂಕ ಬೋ 100000/– ಪ್ರಾ ಕೃ ಪ ಸ ಬ್ಯಾಂಕ ಹೆ ಬೋ 16000/– | 79/2 | ಮರಡಿ | 71 | 78 | 80 | 76 | 00–03–00 | 00.74 | |
| 10 | ರಾಜೇಸಾಬ ಹಸನಸಾಬ ದಂಡಿನ | ಎಮ್.ಆರ್ ಟಿ325/2013–2014 ಎಮ್.ಆರ್ ಟಿ267/2012–2013 ಎಮ್.ಆರ್ ಎಚ್151/2011–2012 ಎಮ್.ಆರ್ 222/2010–2011 ಎಮ್.ಆರ್ 115/2009–2010 ಎಮ್.ಆರ್ 99/2006–2007 ಎಮ್.ಆರ್ 121/2005–2006 ವ್ಯ ಸೇ ಸ ಸಂ ಬೋ 10000/– 2499 ಪಿ.ಕೆ.ಪಿ.ಎಸ್ ಬೋ ; ಮ್ಯಾ ವಿಜಯಾ ಬ್ಯಾಂಕ ಶಾಖೆ ಚಿಕ್ಕೂರ;500000/– ಪ್ರಾ ಕೃ ಪ ಸ ಬ್ಯಾಂಕ ಹೆ ಬೋ 80000/– | 80 | ಮರಡಿ | 71 | 82 | 81 | 79 | 00–01–00 | 02.19 | |

| | | | | | | | | | | | |
|---|---|---|---|---|---|---|---|---|---|---|---|
| 11 | ಗಿರೆಪ್ಪ ಗೋವಿಂದಪ್ಪ ಗಡ್ಡಿ<br>ವೆಂಕಪ್ಪ ಗೋವಿಂದಪ್ಪ ಗಡ್ಡಿ<br>ಹಣಮಪ್ಪ ಗೋವಿಂದಪ್ಪ ಗಡ್ಡಿ<br>ರಂಗಪ್ಪ ಗೋವಿಂದಪ್ಪ ಗಡ್ಡಿ | ಎಮ್.ಆರ್ 117/2008-2009<br>ಪ್ರಾ ಕೃ ಬೋ 40,000/- | 81/1 | ಮರಡಿ | 71 | 82 | 88, 89 | 80 | 00-01-00 | 01.23 | |
| 12 | ಇಮಾಂಬು ರಾಜೇಸಾಬ ದಂಡಿನ<br>ಖಾತುನಾಬಿ ಡೊಂಗರಿಸಾಬ ಕುಂದ್ರಗಿ<br>ರಾಜಮಾ ಸಾಬು ಜೀರಗಾಳ<br>ಪಕೀರಸಾಬ ರಾಜೇಸಾಬ ದಂಡಿನ<br>ಮಹ್ಮದಸಾಬ ರಾಜೇಸಾಬ ದಂಡಿನ<br>ಜಂಗ್ಲಿಸಾಬ ರಾಜೇಸಾಬ ದಂಡಿನ<br>ಲಾಲಸಾಬ ರಾಜೇಸಾಬ ದಂಡಿನ<br>ಬುಡ್ಡೇಸಾಬ ಮಹ್ಮದಸಾಬ ದಂಡಿನ<br>ಇಬ್ರಾಹಿಂಸಾಬ ಸೈದುಸಾಬ ದಂಡಿನ<br>ಖತಲಸಾಬ ಸೈದುಸಾಬ ದಂಡಿನ<br>ಮಹ್ಮದಸಾಬ ಸೈದುಸಾಬ ದಂಡಿನ | - | 83 | ಮರಡಿ | 88 | ಗ್ರಾಮದ ಗಡಿ | 84 | 82 | 00-05-00 | 01.04 | |
| 13 | ಗೋವಿಂದ ತಾಯಿ ಲಕ್ಕವ್ವ ಮಾಂಗ<br>ಪಾಂಡಪ್ಪ ಮಾದರ ತಾಯಿ ಲಕ್ಕವ್ವ | ಎಮ್.ಆರ್ ಟಿ259/2013-2014<br>ಎಮ್.ಆರ್ 71/2008-2009<br>ಎಮ್.ಆರ್ 144/2007-2008<br>ಎಮ್.ಆರ್ 110/2007-2008<br>ಎಮ್.ಆರ್ 71/2005-2006<br>ಪ್ರಾ ಕೃ ಪ ಸ ಬ್ಯಾಂಕ ನಿ ಬರಗಿ ಬೋ ರೂ 100000/-<br>ಕವಿಗ್ರಾ ಬ್ಯಾಂಕ ಬೋ 774000/- ಗ್ರಾ ಬ್ಯಾಂಕ ಬೋ 200000/-;ಮ್ಯಾ, ಕವಿಗ್ರಾ ಬ್ಯಾಂಕ ಶಾಖೆ ಮಾಚಕನೂರ,300000/- | 71/1 | ಕೆಂಪು | 72 | 74, 75, 76,79,80, | 67, 68 | 81,74 | 00-11-00 | 00.73 | |
| | ಒಟ್ಟು ಕ್ಷೇತ್ರ | | | | | | | | 01-12-00 | | |

ಪ್ರಮಾಣ ಪತ್ರ 1).ಈ ಕಾರ್ಯಾಲಯದಲ್ಲಿಯ ಹಿಂದಿನ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸರಿ ಇದೆ ಅಂತಾ ದೃಢೀಕರಿಸಲಾಗಿದೆ.

2).11(1)ರ ಪ್ರಸ್ತಾವನೆಯಲ್ಲಿ ಒಳಗೊಂಡ ಜಮೀನುಗಳು ಈ ಹಿಂದೆ ರಸ್ತೆ ನಿರ್ಮಾಣಕ್ಕಾಗಲಿ ಅಥವಾ ಇನ್ನಾವುದೇ ಉದ್ದೇಶಕ್ಕಾಗಲಿ ಭೂಸ್ವಾಧೀನವನ್ನು ಈ ವರೆಗೂ ಮಾಡಿರುವುದಿಲ್ಲವೆಂಬುವುದನ್ನು ದೃಢೀಕರಿಸಲಾಗಿದೆ.

(ದಿನೇಶ್ ಕುಮಾರ್. ಜಿ.ಟಿ.)ಕೆ.ಎ.ಎಸ್
ವಿಶೇಷ ಭೂಸ್ವಾಧೀನಾಧಿಕಾರಿಗಳು,
3ನೇ ಮಲಪ್ರಭಾ ಯೋಜನೆ, ಬಾಗಲಕೋಟೆ

(ದಿನೇಶಕುಮಾರ ಜಿ.ಟಿ.) (ಪ್ರ)
ವಿಶೇಷ ಜಿಲ್ಲಾಧಿಕಾರಿಗಳು,
(ಭೂಸ್ವಾಧೀನ ... ಮತ್ತು ಪುನರ ನಿರ್ಮಾಣ)
ಬೃಹತ್ ... ಯೋಜನೆಗಳು, ಬೆಳಗಾವಿ.

PR no-593